# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006

ಸಂಖ್ಯೆ: ಕರಾಮುವಿ/ಆಡಿ/ಜಿಎಲ್-2/ಅತರೆ/2019-20 ದಿನಾಂಕ: 13.03.2020

### ಸುತ್ತೋಲೆ

ವಿಷಯ: ಕೋವಿಡ್-19 (ಕೋರೊನಾ ವೈರಸ್) ನಿಯಂತ್ರಿಸುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ರಜೆ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಇಡಿ 107 ಯುಎನ್‌ಇ2020 ದಿನಾಂಕ:13.03.2020
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13.03.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೋರೊನಾ ವೈರಸ್‌ಅನ್ನು ನಿಯಂತ್ರಿಸುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದಿನಾಂಕ: **14.03.2020 ರಿಂದ ದಿನಾಂಕ:28.03.2020 ರವರೆಗೆ 15 ದಿನಗಳ ಕಾಲ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾನಿಲಯಗಳಿಗೆ ರಜೆ ಘೋಷಿಸಲು ನಿರ್ಣಯಿಸಲಾಗಿರುತ್ತದೆ.** ವಿಶ್ವವಿದ್ಯಾನಿಲಯದ ಪರೀಕ್ಷೆಗಳು ನಿಗದಿಯಾಗಿದ್ದಲ್ಲಿ, ಅದನ್ನು ಮುಂದೂಡಿ, ಬೇರೆ ದಿನಾಂಕಗಳಂದು ಪುನರ್ ಆಯೋಜಿಸುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದಿನಾಂಕ:14.03.2020 ರಿಂದ 28.03.2020ರ ವರೆಗೆ ಪರೀಕ್ಷೆಗಳು ನಿಗದಿಯಾಗಿದ್ದಲ್ಲಿ ಮುಂದೂಡಲು ಕ್ರಮವಹಿಸುವಂತೆ ಹಾಗೂ ಈ ಅವಧಿಯಲ್ಲಿ ನಿಗದಿಯಾಗಿದ್ದ ಸಂಪರ್ಕ ಕಾರ್ಯಕ್ರಮಗಳು ಮುಂದೂಡಲಾಗಿದೆ

ಉಳಿದಂತೆ ಕಛೇರಿ ಹಾಗೂ ಅಧ್ಯಯನ ವಿಭಾಗಗಳ ಕೆಲಸ ಕಾರ್ಯಗಳು ಎಂದಿನಂತೆ ನಡೆಯುತ್ತವೆ.

ಕುಲಸಚಿವರು

ಇವರಿಗೆ,

1. ಕುಲಸಚಿವರು ಪರೀಕ್ಷಾಂಗ, ಕರಾಮುವಿ, ಮೈಸೂರು- ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಸದರಿ ದಿನಾಂಕದಂದು ನಿಗದಿಯಾಗಿದ್ದಲ್ಲಿ ಮುಂದೂಡಲು ಕ್ರಮವಹಿಸುವಂತೆ ಸೂಚಿಸಿದೆ
2. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
3. ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ಕರಾಮುವಿ, ಮೈಸೂರು.
4. ನಿರ್ದೇಶಕರು, ಐಟಿ ವಿಭಾಗ, ಕರಾಮುವಿ, ಮೈಸೂರು- ಸದರಿ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವಂತೆ ಸೂಚಿಸಿದೆ.
5. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ಕರಾಮುವಿ, ಮೈಸೂರು.
6. ಎಲ್ಲಾ ಪ್ರಾದೇಶಿಕ ನಿರ್ದೇಶಕರು/ಪ್ರಾದೇಶಿಕ ಕೇಂದ್ರಗಳು, ಕರಾಮುವಿ – ಆಯಾ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾಹಿತಿ ನೀಡಲು ಸೂಚಿಸಿದೆ.

ಪ್ರತಿ:

1. ವಿಶೇಷ ಕರ್ತವ್ಯಧಿಕಾರಿಗಳು, ಮಾನ್ಯ ಕುಲಪತಿಗಳ, ಕರಾಮುವಿ, ಮೈಸೂರು
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು
3. ಕಛೇರಿ ಪ್ರತಿ.

Scanned with CamScanner